ಓ ಎಸ್ ನಂ. 164/2020
ಡಿ ಡಬ್ಲ್ಯು 3
ದಿನಾಂಕ 10-09-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ವಾದಿ ಪರಃ ಶ್ರೀ ಬಿ ಎಂ ಪಿ ವಕೀಲರಿಂದಃ

ಪ್ರಸ್ತುತ ದಾವೆ ಹೂಡಿದ ನಂತರದಲ್ಲಿ ೪ನೇ ಪ್ರತಿವಾದಿ ಹಾಗೂ ಇತರ ಸಾಕ್ಷಿದಾರರೊಂದಿಗೆ ಸೇರಿ ನಿಡಿ-1ರ ವಿಲ್ ನಾಮೆಯನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ವಾದಿ ತಂದೆ ಕಲ್ಲೇಶಪ್ಪರವರು ಯಾವುದೇ ವಿಲ್ ನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಯಾವುದೇ ವ್ಯಕ್ತಿಯ ಗುರುತು ಪರಿಚಯ ಇಲ್ಲದೆ ಇದ್ದಾಗ ನನಗೆ ವೃತ್ತಿ ಅನುಭವದಂತೆ ಯಾವನೇ ಒಬ್ಬ ವ್ಯಕ್ತಿ ಕೇವಲ ಪಹಣಿಗಳನ್ನು ತಂದುಕೊಟ್ಟರೆ ನಾನು ವಿಲ್ ನಾಮೆ ಮಾಡುತ್ತೇನಾ ಎಂದರೆ ಸಾಕ್ಷಿ ಅವರ ಹೆಸರು ಮತ್ತು ಇತರೆ ವಿವರಗಳನ್ನು ವಿಚಾರ ಮಾಡಿದ ನಂತರವೇ ನಾನು ವಿಲ್ ನಾಮೆ ಮಾಡುತ್ತೇನೆ ಎಂದು ನುಡಿಯುತ್ತಾರೆ. ಕೇವಲ ಪಹಣಿಯಲ್ಲಿ ಇರುವಂತಹ ನಮೂದುಗಳ ಆಧಾರದಲ್ಲಿ ವಿಲ್ ನಾಮೆ ಮಾಡುತ್ತೇನಾ ಎಂದರೆ ಸಾಕ್ಷಿ ಪಹಣಿಗಳ ವಿವರಗಳನ್ನು ಮತ್ತು ಗುರುತಿನ ವಿವರಗಳನ್ನು ನಿಖರ ಮಾಡಿಕೊಂಡ ನಂತರ ನಾನು ವಿಲ್ ನಾಮೆ ಮಾಡುತ್ತೇನೆ ಎಂದು ನುಡಿಯುತ್ತಾರೆ. ನಿಡಿ-1ರ ವಿಲ್ ನಾಮೆ ಬರೆಯುವ ಸಮಯದಲ್ಲಿ ಕಲ್ಲೇಶಪ್ಪರವರ ಚುನಾವಣಾ ಗುರುತಿನ

ಚೀಟಿಯನ್ನು ಪರಿಶೀಲನೆ ಮಾಡದೇ ವಿಲ್ ನಾಮೆ ಮಾಡಿದ್ದೇನಾ ಎಂದರೆ ಸಾಕ್ಷಿ ಅವರು ಕ್ರಯಪತ್ರವನ್ನು ಕೊಟ್ಟಿದ್ದರು ಅದರಲ್ಲಿ ವಿವರಗಳು ಇದ್ದವು ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ಕಲ್ಲೇಶಪ್ಪರವರ ಚುನಾವಣಾ ಗುರುತಿನ ಚೀಟಿಯನ್ನು ಪರಿಶೀಲಿಸಿಲ್ಲ ಎಂದರೆ ಸಾಕ್ಷಿ ಅವರು ತಂದಿರಲಿಲ್ಲ ನಾನುಕೇಳಿಲ್ಲ ಎಂದು ನುಡಿಯುತ್ತಾರೆ. ಯಾವುದೇ ಗುರುತಿನ ದಾಖಲೆ ತರದೆ ಇದ್ದ ಕಾರಣ ಆ ವ್ಯಕ್ತಿ ಕಲ್ಲೇಶಪ್ಪರವರೇ ಎಂದು ನನಗೆ ಹೇಳಲಾಗುವುದಿಲ್ಲ ಎಂದರೆ ಸಾಕ್ಷಿ ಗುರುತಿನ ಬಗ್ಗೆ ಖಾತ್ರಿ ಪಡಿಸಿಕೊಂಡೆ ಆ ದಾಖಲೆ ತಯಾರಿಸಿದ್ದೇನೆ ಎಂದು ನುಡಿಯುತ್ತಾರೆ. ನಾನು ಹೇಳುವಂತಹ ಗುರುತಿನ ದಾಖಲೆ ಯಾವುದು ಎಂದು ಎಂದರೆ ಸಾಕ್ಷಿ ಕ್ರಯಪತ್ರ ಮತ್ತು ಆರ್ ಟಿ ಸಿ ಎಂದು ನುಡಿಯುತ್ತಾರೆ.

ವಿಲ್ ನಾಮೆ ಬರೆಯುವ ಸಮಯದಲ್ಲಿ ಸದರಿ ಕಲ್ಲೇಶಪ್ಪರವರ ಹೆಬ್ಬೆಟ್ಟಿನ ಗುರುತು ಪಡೆಯಲು ನನಗೆ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ಅವರು ಸಹಿ ಮಾಡುತ್ತಿದ್ದರು ಆಗಾಗಿ ಹೆಬ್ಬೆಟ್ಟಿನ ಗುರುತು ತೆಗೆದುಕೊಂಡಿಲ್ಲ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಕೆಲವು ದಾಖಲೆಗೆ ಸಹಿ ಮತ್ತು ಹೆಬ್ಬೆಟ್ಟಿನ ಗುರುತನ್ನು ಪಡೆಯುತ್ತಾರೆ ಎಂದರೆ ಸರಿ. ವಿಲ್ ನಾಮೆಯಲ್ಲಿ ಕಲ್ಲೇಶಪ್ಪರವರಿಗೆ ಎಷ್ಟು ಜನ ಮಕ್ಕಳು ಎಂದು ನಮೂದು ಮಾಡಲಾಗಿದೆಯಾ ಎಂದರೆ ಸಾಕ್ಷಿ 4 ಜನ ಹೆಣ್ಣು ಮಕ್ಕಳು ಮತ್ತು 3 ಜನ ಗಂಡು ಮಕ್ಕಳು ಎಂದು ನಮೂದು ಮಾಡಲಾಗಿದೆ ಎಂದು

ನುಡಿಯುತ್ತಾರೆ. ಯಾವ ಉದ್ದೇಶಕ್ಕಾಗಿ ಇತರೆ ಮಕ್ಕಳನ್ನು ಬಿಟ್ಟು ವಿಲ್ ನಾಮೆ ಮಾಡಲಾಗಿದೆ ಎಂದು ಬರೆಯಲಾಗಿದೆಯಾ ಎಂದರೆ ಸಾಕ್ಷಿ ಸದರಿ ಕಲ್ಲೇಶಪ್ಪರವರ ಮೂರು ಜನ ಹೆಣ್ಣು ಮಕ್ಕಳ ಮದುವೆಯಾಗಿದ್ದು ಒಬ್ಬರ ಮದುವೆ ಬಾಕಿ ಇದ್ದು ಆ ಜವಾಬ್ದಾರಿಯನ್ನು ಅವರ ಗಂಡು ಮಕ್ಕಳಿಗೆ ವಹಿಸಿ ಅವರ ಸ್ವಯಾರ್ಜಿತ ಆಸ್ತಿಯನ್ನು ಅವರ ಗಂಡು ಮಕ್ಕಳಿಗೆ ಬರೆಸಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ವಿಲ್ ನಾಮೆ ಬರೆಯುವ ಸಮಯದಲ್ಲಿ ಕೊನೆಗಾಲದಲ್ಲಿ ಯಾರ ಬಳಿ ಕಲ್ಲೇಶಪ್ಪರವರು ಇದ್ದರು ಎಂದು ಕಾಣಿಸಿರುತ್ತಾರಾ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ.

3 ನೇ ಪ್ರತಿವಾದಿ ಜಗದೀಶ್ ರವರು ವೃತ್ತಿಯಲ್ಲಿ ವಕೀಲರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಅವರು ಕಡೂರಿನ ನ್ಯಾಯಾಲಯದಲ್ಲಿ ವಕೀಲರಾಗಿ ಕೆಲಸ ಮಾಡುತ್ತಿದ್ದಾರೆ ಎಂದರೆ ಸರಿ. ನಾನು ಮತ್ತು 3 ನೇ ಪ್ರತಿವಾದಿ ಬಹಳ ವಿಶ್ವಾಸದಿಂದ ಇದ್ದೇವೆ ಎಂದರೆ ಸರಿಯಲ್ಲ. ನಾನು ಮತ್ತು 3 ನೇ ಪ್ರತಿವಾದಿ ವಿಶ್ವಾಸದಿಂದ ಇರುವುದರಿಂದ ಪ್ರಸ್ತುತ ದಾವೆಯನ್ನು ಹೂಡಿದ ನಿಡಿ-1 ರ ವಿಲ್ ನಾಮೆಯನ್ನು ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ನನಗೆ ಕಲ್ಲೇಶಪ್ಪ ಯಾರೆಂದು ಗೊತ್ತಿಲ್ಲದೆ ಇದ್ದರೂ ಸಹ 3 ನೇ ಪ್ರತಿವಾದಿಯ ಮಾತನ್ನು ಕೇಳಿ ನಿಡಿ-1 ರ ವಿಲ್ ನಾಮೆಯನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಕ್ರಯಪತ್ರದಲ್ಲಿ ಇಂತಹವರೇ

ಕಲ್ಲೇಶಪ್ಪ ಎಂದು ಗೊತ್ತಾಗುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

ಮರುವಿಚಾರಣೆ ಇಲ್ಲ

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.